

بِسْمِ اللَّهِ الرَّحْمَنِ الرَّحِيمِ

# ಅಸಭ್ಯ ಮಾತುಗಳನ್ನು ಕೇಳಿಯೂ ನೀವು ಸಹನೆ ಕೈಗೊಳ್ಳಿರಿ. ಕೆಡುಕಿಗೆ ಪ್ರತಿಯಾಗಿ ನೀವು ಸಹ ಕೆಡುಕನ್ನು ಪ್ರದರ್ಶಿಸಬೇಡಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **12-05-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಪಠಿಸಿದರು:*

يَا أَيُّهَا الَّذِينَ آمَنُوا اسْتَعِينُوا بِالصَّبْرِ وَالصَّلَاةِ ۚ إِنَّ اللَّهَ مَعَ الصَّابِرِينَ

**ಯಾಅಯ್ಯುಹಲ್ಲಝೀನ ಆಮನೂಸ್ತಈನೂ ಬಿಸ್ಸಬ್‌ರಿ ವಸ್ಸಲಾತಿ ಇನ್ನಲ್ಲಾಹ ಮಅಸ್ಸಾಬಿರೀನ್.**

ಓ ಸತ್ಯವಿಶ್ವಾಸಿಗಳೇ, ಸಹನೆ ಮತ್ತು ಪ್ರಾರ್ಥನೆಯಿಂದ ನೀವು (ಅಲ್ಲಾಹನ) ಸಹಾಯವನ್ನು ಯಾಚಿಸಿರಿ. ಖಂಡಿತವಾಗಿಯೂ ಅಲ್ಲಾಹನು ಸಹನಶೀಲರೊಂದಿಗಿದ್ದಾನೆ. (ಪವಿತ್ರ ಖುರ್‌ಆನ್ 2: 154).

ಮನುಷ್ಯನ ಜೀವಿತ ಕಾಲದಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ. ಅನೇಕ ಲೌಕಿಕ ಕಷ್ಟಗಳ ಮೂಲಕ ಮನುಷ್ಯನು ದಾಟಿ ಹೋಗುತ್ತಾನೆ. ಎಂತಹ ಪರಿಸ್ಥಿತಿ ಬರುತ್ತದೆ ಎಂದರೆ ಸಹನೆ ದೋರುವುದರ ಹೊರತು ಅವನಿಗೆ ಬೇರೆ ಮಾರ್ಗವಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೆಲವರು ಅತ್ತು ಗೋಳಿಟ್ಟು, ಸಂಭವಿಸಿದ ನಷ್ಟವನ್ನು ಸಹಿಸುತ್ತಾರೆ. ಕೆಲವರು ಹೇಗಿರುತ್ತಾರೆಂದರೆ ಲೌಕಿಕ ನಷ್ಟವನ್ನು ಸಹಿಸಲು ಸಾಧ್ಯವಾಗದೆ ತಮ್ಮ ಬೌದ್ಧಿಕ ಸಂತುಲನೆಯನ್ನು ಕಳೆದುಕೊಳ್ಳುತ್ತಾರೆ. ಆದರೆ ಅಲ್ಲಾಹನ ಕೆಲವು ದಾಸರು ಹೀಗೂ ಇರುತ್ತಾರೆ-ಅವರು ಅಲ್ಲಾಹನ ಆಜ್ಞೆಯನ್ನು ಅಂಗೀಕರಿಸಿ ಅಲ್ಲಾಹನು ಕಳುಹಿಸಿದ ಪ್ರವಾದಿಯನ್ನು, ಅಲ್ಲಾಹನು ಕಳುಹಿಸಿದ ಸಂದೇಶವಾಹಕರನ್ನು ನಂಬಿದ ಕಾರಣದಿಂದ ಜೀವ ಹಾನಿ ಮತ್ತು ಧನ ನಷ್ಟವನ್ನು ಸಹಿಸಬೇಕಾಗುತ್ತದೆ. ಮಾನಸಿಕ ನೋವನ್ನು ಅನುಭವಿಸಬೇಕಾಗುತ್ತದೆ. ಶಾರೀರಿಕವಾದ ಆಕ್ರಮಣಗಳಿಗೆ ಪಾತ್ರರಾಗಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅವರು ಅಲ್ಲಾಹನೊಂದಿಗೆ ಹೀಗೆ ಬೇಡಿಕೊಳ್ಳುತ್ತಾರೆ. 'ಓ ಅಲ್ಲಾಹ್, ನೀನು ಕಳುಹಿಸಿದ ಮಹಾನುಭಾವರನ್ನು ನಂಬಿದ ಕಾರಣ ನಮ್ಮ ವಿರುದ್ಧ ಇಂತಹ ಆಕ್ರಮಣಗಳು ನಡೆಯುತ್ತಿವೆ. ನೀನು ನಮ್ಮ ಸಹನೆಯ ಶಕ್ತಿಯನ್ನು ವರ್ಧಿಸು. ನೀನೇ ನಮಗೆ ಸಹಾಯ ನೀಡು. ನೀನೇ ಈ ದೌರ್ಜನ್ಯಗಾರರ ದೌರ್ಜನ್ಯಗಳಿಂದ ನಮ್ಮನ್ನು ರಕ್ಷಿಸು. ನಿನಗೋಸ್ಕರ ನಾವು ಈ ಪರೀಕ್ಷೆಯನ್ನು ಅನುಭವಿಸುತ್ತಿದ್ದೇವೆ. ನೀನು ನಮಗೆ ಸ್ಥಿರತೆಯನ್ನು ದಯಪಾಲಿಸು.' ಎಂದು ಪ್ರಾರ್ಥಿಸುತ್ತಾರೆ.

ಅಹ್ಮದಿ ಮುಸ್ಲಿಮರು ಮುಹಮ್ಮದೀ ಮಸೀಹರನ್ನು ನಂಬಿದ ಕಾರಣ ಈ ರೀತಿಯ ದೌರ್ಜನ್ಯಗಳಿಗೆ ಪಾತ್ರರಾಗುತ್ತಿದ್ದಾರೆ. ಅನ್ಯರಿಗೆ ಪ್ರಾಯಶಃ ಧಾರ್ಮಿಕ ದೌರ್ಜನ್ಯಗಳು ಪುರಾತನ ಕಥೆಗಳು ಮಾತ್ರವಾಗಿವೆ. ಕೆಲವು ಗುಂಪುಗಳು ಮತ್ತು ಪಂಗಡಗಳು ಹೀಗೆ ಹೇಳಬಹುದು: 'ನಾವು ಸಹ ಧರ್ಮದ ಕಾರಣದಿಂದ ವಿರೋಧಗಳನ್ನೂ ಹಗೆತನವನ್ನೂ ಎದುರಿಸುತ್ತಿದ್ದೇವೆ' ಎಂದು. ಆದರೆ ಈ ಎಲ್ಲ ಗುಂಪುಗಳು ಮತ್ತು ಸಂಘಟನೆಗಳು ಹೇಗಿವೆ ಎಂದರೆ ಅವರು ತಮ್ಮ ವಿರೋಧಿಗಳ ವಿರುದ್ಧ ಸಂದರ್ಭ ದೊರೆತಾಗಲೆಲ್ಲಾ ಅದೇ ರೀತಿಯ ಪ್ರತೀಕಾರ ಮಾಡುವವರಾಗಿದ್ದಾರೆ. ಆದರೆ ಅಹ್ಮದಿಯರು ಮಾತ್ರ ಸತ್ಯವಿಶ್ವಾಸಿಯ ಉದಾಹರಣೆಯ ರೂಪದಲ್ಲಿ ವರ್ತಿಸುತ್ತಾರೆ. ಅವರು ನಿಯಮವನ್ನು ತಮ್ಮ ಕೈಗೆ ಎತ್ತಿಕೊಳ್ಳದೆ, ದೌರ್ಜನ್ಯವನ್ನು ಸಹಿಸಿ, ಅಲ್ಲಾಹನ ಮುಂದೆ ಬಾಗುತ್ತಾರೆ ಮತ್ತು ಅಲ್ಲಾಹನ ಸಹಾಯವನ್ನು ಬೇಡಿಕೊಳ್ಳುತ್ತಾರೆ. ಅಹ್ಮದಿ ಮುಸ್ಲಿಮರು ಮತ್ತು ಲೋಕದ ಅನ್ಯ ಜನರ ಮಧ್ಯೆ ಇರುವ ಬಹಳ ದೊಡ್ಡ ವ್ಯತ್ಯಾಸ ಇದೇ ಆಗಿದೆ. ನಾವು ಅಂತಹ ಜನರಾಗಿದ್ದೇವೆ. ಏಕೆಂದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರಾಗಿದ್ದೇವೆ. ಲೌಕಿಕ ಪರೀಕ್ಷೆಗಳಿಗೆ ಮತ್ತು ವಿರೋಧಿಗಳ ಹಗೆತನಕ್ಕೆ ಪಾತ್ರರಾಗುವಾಗ ನಾವು ಸಹನೆಯನ್ನು ತ್ಯಜಿಸುವವರಲ್ಲ. ನಾವು ನಮ್ಮ ನಂಬಿಕೆಗಳಿಂದ ಹಿಂದೆ ಸರಿಯುವವರೂ ಅಲ್ಲ. ನಮ್ಮ ಕಷ್ಟಗಳಿಗಿರುವ ಪರಿಹಾರ ಮಾರ್ಗ ಅಲ್ಲಾಹನ ಬಳಿ ಮಾತ್ರವಿದೆ ಎಂಬ ಜ್ಞಾನವನ್ನು ನಾವು ಹೊಂದಿದವರಾಗಿದ್ದೇವೆ. ಕಷ್ಟ ಬಂದೆರಗಿದಾಗ ನಾವು ಲೌಕಿಕವಾದಿ ಜನರ ಮುಂದೆ ಅಲ್ಲ, ಸರ್ವಶಕ್ತನಾದ ಅಲ್ಲಾಹನ ಮುಂದೆ ಬಾಗಬೇಕಾಗಿದೆ. ಅವನಿಂದಲೇ ನೆರವನ್ನು ಬೇಡಬೇಕಾಗಿದೆ. ನಮ್ಮ ಸಹನೆ ಮತ್ತು ಪ್ರಾರ್ಥನೆಯ ಕಾರಣ ನಮ್ಮನ್ನು ಅವನೇ ರಕ್ಷಿಸುವವನಾಗಿದ್ದಾನೆ. ಇನ್‌ಶಾಅಲ್ಲಾಹ್ ಅವನು ನಮ್ಮನ್ನು ರಕ್ಷಿಸುವನು.

**ರಹೀಮ್** (ಕಾರುಣ್ಯಮಯಿ) ಮತ್ತು **ಕರೀಮ್** (ದಯಾಮಯಿ) ಆಗಿರುವ ನಮ್ಮ ಅಲ್ಲಾಹನು ಸತ್ಯವಿಶ್ವಾಸಿಯು ಮಾಡುವ ಚಿಕ್ಕಪುಟ್ಟ ಸತ್ಕರ್ಮಗಳಿಗೆ ಸಹ ಅನುಗ್ರಹ ನೀಡುತ್ತಾನೆ. ಸಹನೆ ದೋರುವ ಮತ್ತು ತನ್ನ ಮುಂದೆ ಬಾಗುವ ಸತ್ಯವಿಶ್ವಾಸಿಗೆ ಅಲ್ಲಾಹನ ಕಡೆಯಿಂದ ಅನೇಕ ಶುಭವಾರ್ತೆಗಳಿವೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹನೆ ಮತ್ತು ಪ್ರಾರ್ಥನೆಯ ಮಹತ್ವವನ್ನು ವಿವರಿಸುತ್ತಾ ಅದಕ್ಕೆ ಪ್ರತಿಯಾಗಿ ಅಲ್ಲಾಹನು ಸತ್ಯವಿಶ್ವಾಸಿಯೊಂದಿಗೆ ವರ್ತಿಸುವ ರೀತಿಯ ಬಗ್ಗೆ ಹೀಗೆ ಹೇಳಿದರು: ಅಲ್ಲಾಹನ ಮಾರ್ಗದಲ್ಲಿ ಸುರಿಸಲ್ಪಡುವ ರಕ್ತದ ಬಿಂದು ಮತ್ತು ರಾತ್ರಿ ಹೊತ್ತು ನಫ್ಲ್ ನಮಾಝ್ ಮಾಡುವಾಗ ಅಲ್ಲಾಹನ ಭಯದಿಂದ ಸುರಿಸಲ್ಪಡುವ ಅಶ್ರುಬಿಂದು ಇವುಗಳಿಗಿಂತ ಯಾವುದು ಸಹ ಅಲ್ಲಾಹನಿಗೆ ಇಷ್ಟಕರವಲ್ಲ. ಸಹನೆ ದೋರಿ ನುಂಗುವ ದುಃಖದ ಗುಟುಕುಗಿಂತ ಹೆಚ್ಚು ಪ್ರಿಯವಾದ ಗುಟುಕು ಅಲ್ಲಾಹನಿಗೆ ಬೇರೊಂದಿಲ್ಲ.

ಆದುದರಿಂದ ವೈಯ್ಯಕ್ತಿಕವಾಗಿ ಯಾವುದೇ ನಷ್ಟ ಸಂಭವಿಸಿದಾಗ ಅಥವಾ ಜಮಾಅತಿಗೆ ಸಂಬಂಧಿಸಿದ ಹಾನಿ ಸಂಭವಿಸುವಾಗ ಅಲ್ಲಾಹನ ಸಂಪ್ರೀತಿ ಗಳಿಸುವುದಕ್ಕೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸೂಚಿಸಿದ ತತ್ವಗಳ ಪ್ರಕಾರ ಅಲ್ಲಾಹನ ಮುಂದೆ ಬಾಗಿ ಪ್ರಾರ್ಥಿಸಬೇಕು. ಮತ್ತು ಸಹನೆ ದೋರಬೇಕು. ಹೀಗೆ ಮಾಡಿದರೆ ಅಲ್ಲಾಹನ ಸಾಮೀಪ್ಯ ಲಭಿಸುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಹೇಳಿದರು: ಒಬ್ಬ ದಾಸನ ಮೇಲೆ ದೌರ್ಜನ್ಯ ಎಸಗಲ್ಪಟ್ಟಾಗ ಆ ದಾಸನು ಸಹನೆ ದೋರುವವನಾದರೆ ಅಲ್ಲಾಹನು ಅವನಿಗೆ ಗೌರವ ದಯಪಾಲಿಸುತ್ತಾನೆ. ಅಲ್ಲಾಹನೇ ಓರ್ವನಿಗೆ ಗೌರವ ನೀಡುವುದಾದರೆ ಆ ದಾಸನಿಗೆ ಅದಕ್ಕಿಂತ ಗೌರವಾರ್ಹವಾದುದು ಬೇರೆ ಏನಿದೆ. ಇಂದಿನ ಕಾಲದಲ್ಲಿ ವಿವಿಧ ದೇಶಗಳಲ್ಲಿ ಅಹ್ಮದಿಯಾ ಜಮಾಅತಿನ ಜನರಿಗೆ ಕಠಿಣವಾದ ಕಷ್ಟದ ಪರಿಸ್ಥಿತಿ ಇದೆ. ಅದರ ಬಗ್ಗೆ ನಾವು ಮಾಡಬೇಕಾದುದೇನೆಂದರೆ ಸಹನೆ ಮತ್ತು ಪ್ರಾರ್ಥನೆಯೊಂದಿಗೆ ಅಲ್ಲಾಹನ ನೆರವು ಯಾಚಿಸುತ್ತಾ ಅವನ ಮುಂದೆ ಬಾಗುತ್ತಾ ಇರಬೇಕು. ಅವಿಶ್ವಾಸಿಗಳ ನಾಯಕರನ್ನು ಹಿಡಿಗೂಡಿ ಅವರಿಂದಲೂ ಅವರ ಕುತಂತ್ರಗಳಿಂದಲೂ ಅವರ ಯೋಚನೆಗಳಿಂದಲೂ ನಮ್ಮನ್ನು ರಕ್ಷಿಸಲು ಅವನೇ ಎಲ್ಲರಿಗಿಂತಲೂ ಹೆಚ್ಚು ಶಕ್ತಿಶಾಲಿಯಾದವನಾಗಿದ್ದಾನೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮನಾಗಿ ಇಸ್ಲಾಮಿನ ಪುನಶ್ಚೇತನಗೋಸ್ಕರ ಆಗಮಿಸಿದ ಮಹಾನುಭಾವರನ್ನು ಬೈಅತ್ ಮಾಡಿರುವ ನಾವು ನಮ್ಮವರ ಮತ್ತು ಅನ್ಯರ ವಿರೋಧವನ್ನು ಎದುರಿಸಬೇಕಾಗಿದೆ. ಇಸ್ಲಾಮ್ ಧರ್ಮದ ಆರಂಭಕಾಲದಲ್ಲಿ ಇಸ್ಲಾಮನ್ನು ವಿರೋಧಿಸಿದ ರೀತಿಯಲ್ಲಿ ಈಗಿನ ಕಾಲದಲ್ಲಿ ಅನ್ಯರು ಲೋಕದ ಅನೇಕ ದೇಶಗಳಲ್ಲಿ ಬಹಿರಂಗವಾಗಿ ವಿರೋಧಿಸುವುದಿಲ್ಲ. ಮುಸ್ಲಿಮೇತರರಾದ ಈ ಜನರು ವಿರೋಧಿಸುವುದಾದರೆ ಬಹಳ ಗಾಢವಾಗಿ ಯೋಚಿಸಿ ಉಪಾಯದಿಂದ ವಿರೋಧಿಸುತ್ತಾರೆ. ನಾವು ಅವರನ್ನು ಅವರು ಬಳಸುವ ವಿಧಾನದಲ್ಲಿಯೇ ಪ್ರತಿರೋಧಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿರುವರು: ಇಂದು ಇಸ್ಲಾಮನ್ನು ನಾಶಮಾಡಲು ವಿರೋಧಿಗಳು ಯಾವ ಆಯುಧಗಳನ್ನು ಬಳಸುತ್ತಿದ್ದಾರೆಯೋ ಅದೇ ರೀತಿಯಲ್ಲಿ ನಾವು ಸಹ ಮಾಡಬೇಕು. ಅವರು ಬಳಸುವುದು ಸಾಹಿತ್ಯ ಮತ್ತು ಪ್ರಚಾರದ ಆಯುಧವನ್ನಾಗಿದೆ.

ಮುಸ್ಲಿಮೇತರ ದೇಶಗಳಲ್ಲಿ ಇಸ್ಲಾಮ್ ಹಬ್ಬಲು ಪ್ರಾರಂಭವಾಗುವಾಗ ಮುಸ್ಲಿಮೇತರ ಸರಕಾರಗಳು ಸಹ ಜಮಾಅತನ್ನು ವಿರೋಧಿಸಲು ಪ್ರಾರಂಭಿಸುವರು. ಅಹ್ಮದಿಯಾ ಜಮಾಅತ್ ಪ್ರಚಾರ ಮಾಡುವ ನೈಜ ಇಸ್ಲಾಮ್, ಜಮಾಅತ್ ಹಬ್ಬಿಸುತ್ತಿರುವ ಈ ಇಸ್ಲಾಮ್ ಜಯಗಳಿಸುವುದೆಂದು ಅವರಿಗೆ ತಿಳಿದಿದೆ. ನೈಜ ಇಸ್ಲಾಮ್ ಅಹ್ಮದಿಯಾ ಜಮಾಅತ್ ಮೂಲಕವೇ ಹರಡುವುದು ವಿಧಿಸಲ್ಪಟ್ಟಿದೆ. ಆದರೆ ಈ ಮುಲ್ಲಾಗಳು ಪ್ರತಿಯೊಂದು ಸ್ಥಳದಲ್ಲಿ ವಿರೋಧದ ಮಂಚೂಣಿಯಲ್ಲಿದ್ದಾರೆ. ಹಿಂದಿನ ಕಾಲದಲ್ಲಿ ಧರ್ಮದ ವಿರುದ್ಧ ನಡೆಸಲಾದಂತಹ ದೌರ್ಜನ್ಯಗಳನ್ನು ಈ ಮುಲ್ಲಾಗಳು ನಡೆಸುತ್ತಿದ್ದಾರೆ. ರಾಜಕಾರಣಿಗಳಿಗೆ ಧರ್ಮದ ಬಗ್ಗೆ ಏನೂ ತಿಳಿದಿರದಿದ್ದರೂ ಓಟು ಮತ್ತು ಅಗ್ಗವಾಗಿ ದೊರಕುವ ಪ್ರಸಿದ್ಧಿಯ ಕಾರಣದಿಂದ ಅವರು ಸಹ ಈ ಮುಲ್ಲಾಗಳ ಹಿಂದೆ ನಡೆಯುತ್ತಿದ್ದಾರೆ. ಇಸ್ಲಾಮಿನ ಬಗ್ಗೆ ಅಭಿಮಾನದ ಹೆಸರಿನಲ್ಲಿ ಅಹ್ಮದಿಯರನ್ನು ಆಕ್ರಮಿಸುತ್ತಾರೆ. ಅಸೆಂಬ್ಲಿಗಳಲ್ಲಿ ಅಹ್ಮದಿಯರ ವಿರುದ್ಧ ನಿಯಮಗಳನ್ನು ಪಾಸು ಮಾಡಲು ಪ್ರಯತ್ನಿಸುತ್ತಿದ್ದಾರೆ. ಪಾಕಿಸ್ಥಾನದ ಕಾಶ್ಮೀರ ಅಸೆಂಬ್ಲಿಯಲ್ಲಿ ಪಾಕಿಸ್ಥಾನೀ ಮುಲ್ಲಾಗಳಿಂದ ಪ್ರಭಾವಿತರಾಗಿ ಅಹ್ಮದಿಯರನ್ನು ಮುಸ್ಲಿಮೇತರರೆಂದು ಘೋಷಿಸುವ ಠರಾವು ಮಂಡಿಸಲಾಗಿದೆ.

ಈ ಜನರು ಏನೆಲ್ಲಾ ಮಾಡಲು ಇಚ್ಛಿಸುತ್ತಾರೋ ಮಾಡಲಿ. ಪಾಕಿಸ್ಥಾನದ ಪಾರ್ಲಿಮೆಂಟ್ ಅಹ್ಮದಿಯರನ್ನು ಮುಸ್ಲಿಮೇತರರೆಂದು ಘೋಷಿಸಿ ಗಳಿಸಿದುದಾದರೂ ಏನು? ಅವರಿಗೆ ಜಮಾಅತಿನ ಅಭಿವೃದ್ಧಿಯನ್ನು ತಡೆಗಟ್ಟಲು ಸಾಧ್ಯವಾಯಿತೆ? ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಹೊಸ ಹೊಸ ವಿಶಾಲತೆಗಳನ್ನು ಗಳಿಸುತ್ತಾ ಸಾಗುತ್ತಿದೆ. ಆದರೆ ಅಹ್ಮದಿಯಾ ಜಮಾಅತಿನ ಜನರು ನೆನಪಿಡಬೇಕಾದುದೇನೆಂದರೆ ಸಹನೆಯೊಂದಿಗೆ ಅಲ್ಲಾಹನ ಸಹಾಯ ಬೇಡಿಕೊಳ್ಳುತ್ತಾ ಅವನ ಮುಂದೆ ಬಾಗಬೇಕು. ತಮ್ಮ ನಮಾಝ್‌ಗಳನ್ನು ಮತ್ತು ಆರಾಧನೆಗಳನ್ನು ಸಂರಕ್ಷಿಸಬೇಕಾದುದು ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯ ಆಗಿದೆ. ಇವುಗಳೇ ಅಲ್ಲಾಹನ ಅನುಗ್ರಹಗಳ ಹೆಚ್ಚಿನ ವಾರೀಸುದಾರರನ್ನಾಗಿ ಮಾಡುವುದು.

ಅಲ್‌ಜೀರಿಯಾ ದೇಶದಲ್ಲಿ ಅಹ್ಮದಿಯರಿಗೆ ವಿರೋಧವಿದೆ. ಬಂಗ್ಲಾದೇಶದಲ್ಲಿ ನಿರಂತರವಾಗಿ ವಿರೋಧ ಜಾರಿಯಲ್ಲಿದೆ. ಇಂಡೋನೇಶಿಯಾದಲ್ಲಿಯೂ ಅರಬ್ ದೇಶಗಳಲ್ಲಿಯೂ ವಿರೋಧ ನಡೆಯುತ್ತಿದೆ. ಇತ್ತೀಚೆಗೆ ಬಂಗ್ಲಾದೇಶದ ಮೇಮನ್‌ಸಿಂಗ್ ಜಿಲ್ಲೆಯ ಶಬಾಯಿ ಎಂಬ ಗ್ರಾಮದಲ್ಲಿ ನಮ್ಮ ಮಸ್‌ಜಿದನ್ನು ಮೌಲವಿಗಳು ಆಕ್ರಮಿಸಿದರು. ನಮ್ಮ ಮುಬಲ್ಲಿಗ್ ಮುಸ್ತಫೀಝುರ್ರಹ್ಮಾನ್‌ರನ್ನು ಖಡ್ಗ ಮತ್ತು ಕತ್ತಿಗಳಿಂದ ಆಕ್ರಮಿಸಿ ಕಠಿಣವಾಗಿ ಗಾಯಗೊಳಿಸಿದರು. ಅವರ ಶರೀರವಿಡೀ ಗಾಯಗಳಿಂದ ತುಂಬಿತ್ತು. ಅವರ ಹೊಟ್ಟೆಯನ್ನು ಕತ್ತಿಯಿಂದ ಸೀಳಲಾಗಿತ್ತು. ಇದರ ಪರಿಣಾಮವಾಗಿ ಅವರ ಮೂತ್ರಪಿಂಡ (ಕಿಡ್ನಿ) ಹೊರಗೆ ಬಂತು. ಕುತ್ತಿಗೆಯನ್ನೂ ಚೂರಿಯಿಂದ ತಿವಿದಿದ್ದರು. ಆದರೆ ಜೀವನಾಡಿ ತುಂಡಾಗದೆ ರಕ್ಷಿಸಲ್ಪಟ್ಟಿತು. ಅವರನ್ನು ನೋಡಿದವರು ರಕ್ತದ ಓಕುಳಿ ಹರಿಯುತ್ತಿತ್ತು ಎಂದು ವರದಿ ಮಾಡಿದ್ದಾರೆ. ಆದರೆ ಪೋಲೀಸರು ಆ ಸಂದರ್ಭದಲ್ಲಿ ಅಲ್ಲಿಗೆ ತಲಪಿ ಅವರನ್ನು ಆಸ್ಪತ್ರೆಗೆ ಪ್ರವೇಶಗೊಳಿಸಿದರು. ಜಮಾಅತಿನ ಜನರು ಸಹ ಅಲ್ಲಿಗೆ ತಲಪಿದರು. ಖುದ್ದಾಮ್‌ಗಳು ಕೂಡಲೆ ರಕ್ತ ನೀಡಿದರು. ಅಲ್ಲಾಹನ ಅನುಗ್ರಹದಿಂದ ಆಸ್ಪತ್ರೆಯಲ್ಲಿ ಒಳ್ಳೆಯ ಡಾಕ್ಟರ್‌ಗಳಿದ್ದರು. ಅಲ್ಲಿ ಉತ್ತಮ ಚಿಕಿತ್ಸೆ ನೀಡಲಾಗಿದೆ. ಅನೇಕ ಗಂಟೆಗಳ ಕಾಲ ಅವರಿಗೆ ಆಪರೇಶನ್ ಮಾಡಲಾಯಿತು. ನಿನ್ನೆಯ ತನಕದ ವರದಿ ಪ್ರಕಾರ ಅವರ ಆರೋಗ್ಯದ ಸ್ಥಿತಿ ಸ್ಥಿರವಾಗಿದೆ. ಆದರೆ ಅಪಾಯದಿಂದ ಅವರು ಪಾರಾಗಿಲ್ಲ. ಅವರಿಗೆ ಸ್ವಲ್ಪ ಮಟ್ಟಿಗೆ ಪ್ರಜ್ಞೆ ಬಂದಿದೆ. ಆದರೆ ಅವರಿಗೆ ಮಾತನಾಡಲು ಸಾಧ್ಯವಾಗಲಿಲ್ಲ. ಆದರೆ ಕಾಗದದಲ್ಲಿ ಅವರು ಬರೆದು ಕೊಟ್ಟದ್ದು ಒಬ್ಬ ಸತ್ಯವಿಶ್ವಾಸಿಯ ವೈಭವಕ್ಕೆ

ಅನುಸಾರವಾಗಿದೆ. ಅವರಿಗೆ ಬೇರೆಯವರ ಬಗ್ಗೆ ಚಿಂತೆ ಇದೆ. ಅವರು ಇನ್ನೋರ್ವ ಮುರಬ್ಬಿಯ ಸಂರಕ್ಷಣೆಗೆ ವ್ಯವಸ್ಥೆ ಮಾಡಲು ಬರೆದಿದ್ದಾರೆ. ತಮ್ಮ ತಂದೆ ತಾಯಂದಿರ ಬಗ್ಗೆ ಅವರಿಗಿರುವ ಚಿಂತೆಯ ಬಗ್ಗೆ ಬರೆದಿದ್ದಾರೆ. ಅಲ್ಲಾಹನು ಅವರಿಗೆ ಆರೋಗ್ಯಪೂರ್ಣವಾದ ದೀರ್ಘಾಯುಸ್ಸನ್ನು ದಯಪಾಲಿಸಲಿ. ಅವರಿಗೆ ಬೇಗನೆ ಪರಿಪೂರ್ಣವಾದ ರೋಗಶಮನ ದಯಪಾಲಿಸಲಿ.

ಕೆಲವರು ನನಗೆ ಹೀಗೆ ದೂರು ನೀಡಿದ್ದಾರೆ: ಕೆಲವು ಅಹ್ಮದಿಯರು ಇತರರೊಂದಿಗೆ ನೇರವಾಗಿ ಮಾತನಾಡುವಾಗ ಅಥವಾ ಸೋಶಿಯಲ್ ಮೀಡಿಯಾ ಮುಖಾಂತರ ವಾದಪ್ರತಿವಾದ ಮಾಡುವಾಗ ಅಥವಾ ಮೌಲವಿಗಳಿಗೆ ತಬ್ಲೀಗ್ ಮಾಡುವಾಗ ಎಂತಹ ಕಟು ಶಬ್ದಗಳನ್ನು ಬಳಸುತ್ತಾರೆಂದರೆ ಅವುಗಳನ್ನು ಅಹ್ಮದಿಯರು ಬಳಸುವುದು ಅವರ ಗೌರವಕ್ಕೆ ಹಾನಿಕರವಾಗಿದೆ. ಕೆಲವರು ನನಗೆ ಹೀಗೆ ಸಹ ಬರೆದಿದ್ದಾರೆ: ಅಹ್ಮದಿಯರ ಬಾಯಿಯಿಂದ ಕೊಳಕು ಬೈಗಳನ್ನು ಮತ್ತು ಅಂತಹ ಮಾತುಗಳನ್ನು ಆಲಿಸುವಾಗ ಬಹಳ ಆತಂಕವಾಗುತ್ತದೆ ಎಂದು. ಇದು ಸತ್ಯವಾದ ವಿಷಯವಾಗಿದ್ದರೆ ನಾನು ಅಂತಹ ಅಹ್ಮದಿಯರೊಂದಿಗೆ ಹೇಳಲು ಬಯಸುತ್ತೇನೆ. ಅವರು ತಬ್ಲೀಗ್ ಮಾಡದಿರುವುದೇ ಉತ್ತಮವೆಂದು. ಅವರು ಈ ರೀತಿ ತಬ್ಲೀಗ್ ಮಾಡುವುದರಿಂದ ಅವರಿಗೆ ಅಲ್ಲಾಹನ ಸಾಮೀಪ್ಯ ಲಭಿಸುವುದಕ್ಕೆ ಬದಲಾಗಿ ಅವರು ಅಲ್ಲಾಹನ ಕೋಪಕ್ಕೆ ಪಾತ್ರರಾಗುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಮಾತನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕಾದುದು ಆವಶ್ಯಕವಾಗಿದೆ. ಅವರು ಹೇಳಿದರು: ನನ್ನನ್ನು ಈ ವಿಷಯದ ಬಗ್ಗೆ ನಿಯೋಜಿಸಲಾಗಿದೆ. ನೀವು ಎಲ್ಲ ವಿಧಗಳ ಗಲಬೆ ಗೊಂದಲಗಳ ಸ್ಥಳಗಳಿಂದ ನಿಮ್ಮನ್ನು ದೂರ ಸರಿಸುತ್ತಾ ಇರಬೇಕು. ನೀವು ಬೈಗಳನ್ನು ಆಲಿಸಿ ಸಹ ಸಹನೆದೋರಬೇಕು. ಕೆಡುಕಿಗೆ ಉತ್ತರ ಒಳಿತಿನಿಂದ ನೀಡಿರಿ. ಯಾರಾದರೂ ಜಗಳ ಮಾಡಲು ಉದ್ದೇಶಿಸುವುದಾಗಿ ಕಂಡರೆ ನೀವು ಅಲ್ಲಿಂದ ದೂರಸರಿದು ಹೋಗುವುದೇ ಉತ್ತಮವಾಗಿದೆ. ನೀವು ಮೃದುವಾಗಿ ಉತ್ತರ ನೀಡಿರಿ. ಹಲವು ಸಂದರ್ಭಗಳಲ್ಲಿ ಏನಾಗುತ್ತದೆ ಎಂದರೆ ಒಬ್ಬನು ಬಹಳ ಉತ್ಸಾಹಭರಿತನಾಗಿ ವಿರೋಧಿಸುತ್ತಾನೆ. ಅವನು ಯಾವ ರೀತಿ ವರ್ತಿಸುತ್ತಾನೆಂದರೆ ಅದು ಗಲಬೆ ಗೊಂದಲಗಳಿಗೆ ಕಾರಣವಾಗುತ್ತದೆ. ಅವನ ಮಾತುಗಳನ್ನು ಆಲಿಸುವವರು ರೊಚ್ಚಿಗೇಳುವಂತಾಗುತ್ತದೆ. ಆದರೆ ಅಂತಹ ವ್ಯಕ್ತಿಗೆ ಎದುರಾಗಿರುವವರು ಮೃದುವಾಗಿ ಉತ್ತರ ನೀಡಿದರೆ ಬೈಗಳಿಗೆ ಬೈಗಳಿಂದ ಉತ್ತರ ನೀಡದಿದ್ದರೆ ಆ ವ್ಯಕ್ತಿ ಸ್ವತಃ ನಾಚುವಂತಾಗುತ್ತದೆ. ಆದುದರಿಂದ ನಮಗೆ ನೀಡಲಾದ ಉಪದೇಶ, ಬೈಗಳನ್ನು ಆಲಿಸಿದರೂ ಮೃದುವಾಗಿ ಉತ್ತರ ನೀಡಬೇಕೆಂದಾಗಿದೆ. ಸಹನೆಯೇ ಹೃದಯಗಳನ್ನು ಜಯಿಸುತ್ತದೆ. ನಮ್ಮ ಜಮಾಅತಿಗೆ ಸೇರಿದ ಯಾರಾದರೊಬ್ಬ ವ್ಯಕ್ತಿ ಜಗಳ ಮಾಡುವುದಾಗಿ ತಿಳಿದಾಗ ನನಗೆ ಬಹಳ ದುಃಖವಾಗುತ್ತದೆ. ಕೆಲವು ಅಹ್ಮದಿಯರು ಸೋಶಿಯಲ್ ಮೀಡಿಯಾಗಳಲ್ಲಿ ಕೋಪೋದ್ರೇಕದಿಂದ ತುಂಬಿ ತಪ್ಪಾಗಿ ಉತ್ತರ ನೀಡುತ್ತಿರುವುದು ಸತ್ಯವೆಂದಾದರೆ, ಅವರು ಮಾಡುವುದು ತಪ್ಪು ಕೃತ್ಯವಾಗಿದೆ. ಇಂತಹ ಜನರು ಒಂದು ಪಾಪ ಕೃತ್ಯವನ್ನು ಮಾತ್ರ ಮಾಡುವವರಲ್ಲ. ಅವರು ಹೊಸ ಪೀಳಿಗೆಯವರನ್ನು ಅಹ್ಮದಿಯ್ಯತ್ತಿನಿಂದ ದೂರ ಸರಿಸುವ ಪಾಪ ಕೃತ್ಯ ಸಹ ಮಾಡುವವರಾಗಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವಿಧ ರೀತಿಗಳಲ್ಲಿ ನಮಗೆ ಉಪದೇಶಿಸಿದ್ದಾರೆ– ನಾವು ಸಹನೆಯನ್ನು ಬಿಗಿಯಾಗಿ ಹಿಡಿದಿಡಬೇಕೆಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ– ಈ ಜನರು ನನ್ನನ್ನು ಬೈಯುತ್ತಿದ್ದಾರೆ. ಆದರೆ ನಾನು ಅವರ ಬೈಗಳನ್ನು ನಿರ್ಲಕ್ಷಿಸುತ್ತೇನೆ. ನಾನು ಅವುಗಳನ್ನು ಕೇಳಿ ದುಃಖಿಸುವುದಿಲ್ಲ. ಏಕೆಂದರೆ ಅವರು ನನ್ನೆದುರಿಗೆ ಸೋತು ಹೋಗಿದ್ದಾರೆ. ಅವರು ತಮ್ಮ ಸೋಲನ್ನು ಮರೆಮಾಡಲು ಬೈಗಳನ್ನು ಬಳಸದೆ ಬೇರೆ ಮಾರ್ಗವಿಲ್ಲ. ಸಾಕ್ಷ್ಯಾಧಾರಗಳು ಅವರ ಬಳಿ ಇಲ್ಲ. ಅವರು ಸೋತುಹೋದ ಕಾರಣ ಮತ್ತು ಸಾಕ್ಷ್ಯಾಧಾರಗಳಿಲ್ಲದ ಕಾರಣ ಬೈಯ್ಯುತ್ತಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ವಿರೋಧಿಗಳು ನನ್ನ ವಿರುದ್ಧ ಕುಫ್ರ್(ಅವಿಶ್ವಾಸದ) ಫತ್ವ ಹೊರಡಿಸಲಿ, ನನ್ನ ವಿರುದ್ಧ ಸುಳ್ಳು ಮೊಕದ್ದಮೆ ಹೂಡಲಿ, ವಿವಿಧ ರೀತಿಗಳ ಸುಳ್ಳುಗಳನ್ನು ಸೃಷ್ಟಿಸಿ ಪ್ರಚಾರ ಮಾಡಲಿ, ಅವರು ತಮ್ಮ ಎಲ್ಲ ಶಕ್ತಿಗಳನ್ನು ಒಗ್ಗೂಡಿಸಿ ನನ್ನನ್ನು ವಿರೋಧಿಸಲಿ. ಆದರೆ ಕೊನೆಯ ತೀರ್ಪು ಯಾರ ಪರವಾಗಿರುವುದು ಎಂದು ಅವರು ನೋಡಲಿ. ನಾನು ಅವರ ಬೈಗಳ ಕಡೆಗೆ ಲಕ್ಷ್ಯ ನೀಡಲು ಪ್ರಾರಂಭಿಸಿದರೆ ಅಲ್ಲಾಹನು ನನಗೆ ವಹಿಸಿಕೊಟ್ಟ ಮುಖ್ಯ ಕೆಲಸ ಉಳಿದು ಬಿಡುತ್ತದೆ. ಆದುದರಿಂದ ನಾನು ಅವರ ಬೈಗಳ ಕಡೆಗೆ ಲಕ್ಷ್ಯ ನೀಡುವುದಿಲ್ಲ. ಆದುದರಿಂದ ನಾನು ನನ್ನ ಜಮಾಅತಿನ ಜನರೊಂದಿಗೆ ಉಪದೇಶಿಸುತ್ತೇನೆ. ಅವರು ಬೈಗಳನ್ನು ಆಲಿಸಿ ಸಹಿಸಿಕೊಳ್ಳಬೇಕು. ಬೈಗಳಿಗೆ ಪ್ರತಿಯಾಗಿ ಎಂದೂ ಬೈಯ್ಯಬಾರದು. ಏಕೆಂದರೆ ಬೈದರೆ ಅನುಗ್ರಹ ಹೊರಟು ಹೋಗುತ್ತದೆ. ನೀವು ಸಹನೆಯ ಉತ್ತಮ ಉದಾಹರಣೆಯನ್ನು ತೋರಿಸಿರಿ. ನೀವು ನಿಮ್ಮ ಸದ್ಗುಣಗಳನ್ನು ತೋರಿಸಿರಿ. ನಿಶ್ಚಯವಾಗಿಯೂ ನೆನಪಿಡಿರಿ, ಬುದ್ಧಿ ಮತ್ತು ಭಾವೋದ್ವೇಗ ಇವುಗಳ ಮಧ್ಯೆ ಅಪಾಯಕರವಾದ ವಿರೋಧವಿದೆ. ಭಾವೋದ್ವೇಗ ಮತ್ತು ಸಿಟ್ಟು ಬರುವಾಗ ಬುದ್ಧಿ ಸ್ಥಿರವಾಗಿರಲಾರದು. ಆದರೆ ಸಹನೆ ದೋರುವವನಿಗೆ ಒಂದು ಪ್ರಕಾಶ ನೀಡಲ್ಪಡುತ್ತದೆ. ಆ ಮೂಲಕ ಅವನ ಬುದ್ಧಿ ಮತ್ತು ಯೋಚನೆಗಳ ಶಕ್ತಿಗಳಲ್ಲಿ ಒಂದು ಹೊಸ ಪ್ರಕಾಶ ಉಂಟಾಗುತ್ತದೆ. ಅನಂತರ ಪ್ರಕಾಶದಿಂದ ಪ್ರಕಾಶ ಹುಟ್ಟುತ್ತದೆ. ಆದರೆ ಸಿಟ್ಟು ಮತ್ತು ಭಾವೋದ್ವೇಗದ ಕಾಲದಲ್ಲಿ ಹೃದಯ ಮತ್ತು ಮಸ್ತಿಷ್ಕಕ್ಕೆ ಅಂಧಕಾರ ಕವಿದಿರುತ್ತದೆ. ಅಂಧಕಾರದಿಂದ ಅಂಧಕಾರವೇ ಹುಟ್ಟುತ್ತದೆ.

ಬುದ್ಧಿ ಮತ್ತು ಚಿಂತಿಸುವ ಶಕ್ತಿಯನ್ನು ವರ್ಧಿಸಬೇಕಾದರೆ ಹೃದಯ ಮತ್ತು ಮಸ್ತಿಷ್ಕದಲ್ಲಿ ಪ್ರಕಾಶ ಹುಟ್ಟಿಸಬೇಕಾದರೆ ಸಿಟ್ಟು ಮತ್ತು ಭಾವೋದ್ವೇಗವನ್ನು ಯಾವಾಗಲೂ ನಾವು ಅದುಮಿ ಹಾಕುವ ಆವಶ್ಯಕತೆ ಇದೆ. ಹಾಗೆ ಮಾಡಿದರೆ ಅಲ್ಲಾಹನ ಅನುಗ್ರಹಗಳು ಇನ್ನಷ್ಟು ವರ್ಧಿಸುವುವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನಿಮ್ಮ ಕರ್ಮಗಳನ್ನು ಶುದ್ಧವಾಗಿರಿಸಿರಿ. ಯಾವಾಗಲೂ ಅಲ್ಲಾಹನ ಸ್ಮರಣೆ ಮಾಡುತ್ತಾ ಇರಿ. ಮತ್ತು ಎಂದೂ ನಿರ್ಲಕ್ಷ್ಯತೆ ತೋರಿಸಬೇಡಿರಿ. ಯಾವರೀತಿ ಬೇಟೆಗಾರನಿಂದ ತಪ್ಪಿಸಿಕೊಂಡು ಓಡುತ್ತಿರುವ ಶಿಕಾರಿ ಮೃಗ ಸ್ವಲ್ಪ ಮಾತ್ರ ಉದಾಸೀನತೆ ತೋರಿಸಿದರೆ ಬೇಟೆಗಾರನ ಕೈವಶಕ್ಕೊಳಗಾಗುವುದೋ ಹಾಗೆಯೇ ಅಲ್ಲಾಹನ ಸ್ಮರಣೆಯನ್ನು ನಿರ್ಲಕ್ಷಿಸುವವನು ಶೈತಾನನಿಂದ ಬೇಟೆಯಾಡಲ್ಪಡುತ್ತಾನೆ. ನೀವು ತೌಬವನ್ನು ಯಾವಾಗಲೂ ಜೀವಂತವಾಗಿ ಇರಿಸಿರಿ. ಅದು ಎಂದೂ ಮೃತವಾಗದಂತೆ ನೋಡಿಕೊಳ್ಳಿರಿ. ಇಸ್ತಿಗ್‌ಫಾರ್ ಬಹಳ ಹೆಚ್ಚು ಹೆಚ್ಚಾಗಿ ಮಾಡಿರಿ. ಯಾವ ಅವಯವದಿಂದ ಕೆಲಸ ಮಾಡಿಸಲಾಗುತ್ತಿದೆಯೋ ಅದೇ ಅವಯವ ಕೆಲಸ ಮಾಡಬಲ್ಲದು. ಯಾವ ಅವಯವವನ್ನು ನಿಷ್ಕ್ರಿಯವಾಗಿ ಬಿಟ್ಟುಬಿಡಲಾಗುತ್ತಿದೆಯೋ ಅದು ಯಾವಾಗಲೂ ನಿಷ್ಕ್ರಿಯವಾಗಿರುತ್ತದೆ. ಇದೇ ರೀತಿ ತೌಬವನ್ನು ಸಹ ಚಲನೆಯಲ್ಲಿರಿಸಿರಿ. ಅದು ನಿರರ್ಥಕವಾಗದಿರಲಿ.

ನಾವು ಜಯಶಾಲಿಗಳಾಗಲು ನಮಗಿರುವ ಆಯುಧಗಳು, ಇಸ್ತಿಗ್‌ಫಾರ್, ತೌಬ, ಧಾರ್ಮಿಕಜ್ಞಾನಾರ್ಜನೆ, ಅಲ್ಲಾಹನ ಮಹೋನ್ನತ ಸ್ಥಾನವನ್ನು ಗಮನದಲ್ಲಿರಿಸುವುದು, ಐದು ಹೊತ್ತಿನ ನಮಾಝ್ ಅನುಷ್ಠಾನ ಮೊದಲಾದವುಗಳಾಗಿವೆ. ನಮಾಝ್ ಎಂಬುದು ಪ್ರಾರ್ಥನೆಗಳು ಅಂಗೀಕಾರಗೊಳ್ಳುವ ಕೀಲಿಗೈ ಆಗಿದೆ. ನಮಾಝ್ ಮಾಡುವಾಗ ದುಆ ಮಾಡಿರಿ. ಅದರಲ್ಲಿ ನಿರ್ಲಕ್ಷ್ಯತೆ ತೋರಿಸಬೇಡಿರಿ. ಎಲ್ಲ ವಿಧಗಳ ಕೆಡುಕುಗಳಿಂದ ರಕ್ಷಣೆ ಪಡೆಯಿರಿ. ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದ್ ಇವುಗಳನ್ನು ಈಡೇರಿಸದಿರುವುದರಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ.

ಜುಮುಅ ನಮಾಝ್ ನಿರ್ವಹಿಸಿದ ನಂತರ ನಾನು ಒಂದು ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಕೇರಳದ ಪಯಂಗಾಡಿಯ ನಿವಾಸಿ ಮುಕರ್ರಮ್ ಪಿ.ಪಿ ನಾಝಿಮುದ್ದೀನ್ ಸಾಹೇಬರು 3–5–2017ರಂದು ಒಂದು ರೈಲು ಅಪಘಾತದಲ್ಲಿ ಮೃತರಾದರು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

*****

***Friday Sermon delivered by Hadrath Khaleefatul Masih Al Khamis***(atba)

*At, Masjid Baithul Futhuh, London on 12-05-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon